**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

***Spl.C.No.119/2018***

PW.12
CW.7

ದಿನಾಂಕಃ 09-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರುಃ | ರಾಕೇಶ |
| ತಂದೆಯ ಹೆಸರುಃ | ಶ್ರೀನಿವಾಸ |
| ವಯಸ್ಸು | 27 ವರ್ಷ |
| ವೃತ್ತಿಃ | ಚಾಲಕ |
| ವಾಸಸ್ಥಳಃ | ಮಧುಗಿರಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾಃ 1 ರಿಂದ 6 ಗೊತ್ತಿಲ್ಲ. ಚಾಸಾಃ 8, 9, 11 ಮತ್ತು 12 ಗೊತ್ತಿಲ್ಲ. ನಾನು ಕಾರು ಚಾಲಕ. ಬೇರೆಯವರ ಮಾಲೀಕತ್ವದ ಕಾರನ್ನು ನಾನು ಚಾಲನೆ ಮಾಡುತ್ತೇನೆ. ನಾನು ನಮ್ಮ ಊರಿನ ದಂಡಿ ಮಾರಮ್ಮನ ದೇವಸ್ಥಾನ ನೋಡಿದ್ದೇನೆ. ನಾನು ಈಪ್ರಕರಣಕ್ಕೆ ಸಂಬಂದಿಸಿದಂತೆ ನಾನು ದೇವಸ್ಥಾನದ ಬಳಿ ಹೋಗಿಲ್ಲ. ನನ್ನೊಂದಿಗೆ ಯಾರೂ ದೇವಸ್ಥಾನದ ಬಳಿ ಮಾತನಾಡಲು ಬಂದಿಲ್ಲ. ನಾನು ದೇವಸ್ಥಾನದ ಬಳಿ ಹೋದಾಗ ಯಾವುದೇ ಗಲಾಟೆ ಅಥವಾ ಘಟನೆ ನೋಡಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಅರೋಪಿಗಳನ್ನು ನಾನು ಈ ಹಿಂದೆ ನೋಡಿಲ್ಲ. ವಿಸಿ ಮೂಲಕ ಹಾಜರುಪಡಿಸಿರುವ 2

ಮತ್ತು 3 ನೇ ಅರೋಪಿಗಳನ್ನುನೋಾಡಿಲ್ಲ. 1 ರಿಂದ 3 ನೇ ಅರೋಪಿಗಳು ದೇವಸ್ಥಾನದ ಮುಂದೆ ಯಾರನ್ನೋ ಹೊಡೆಯುತ್ತಿದ್ದುದನ್ನು ನಾನು ನೋಡಿಲ್ಲ. ಮೃತ ಮಹಾಂತೇಶ ನನಗೆ ಗೊತ್ತಿಲ್ಲ. ಆತ ಮೃತನಾಗಿರುವ ವಿಚಾರ ಗೊತ್ತು. ಅದರೆ ಯಾವ ಕಾರಣಕ್ಕೆ ಹೇಗೆ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾರು ಅತನನ್ನು ಕೊಲೆ ಮಾಡಿರುತ್ತಾರೆ ನನಗೆ ಗೂತ್ತಿಲ್ಲ. 1 ರಿಂದ 3 ನೇ ಅರೋಪಿಗಳು ಮಹಾಂತೇಶನಿಗೆ ಲಾಂಗು ಮತ್ತು ರಾಡಿನಿಂದ ಹೊಡೆದು ಬೀರು ಬಾಟಲ್ ನಿಂದ ತಿವಿದಿದ್ದನ್ನು ನಾನು ನೋಡಿದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಯಾವುದೇ ಅರೋಪಿಗಳನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಠಾಣೆಯಲ್ಲಿ 1 ರಿಂದ 3 ನೇ ಅರೋಪಿಗಳನ್ನು ನೋಡಿ ಗುರುತಿಸಿಲ್ಲ. ಅರೋಪಿಗಳು ಮಹಾಂತೇಶನಿಗೆ ಹೊಡೆಯುತ್ತಿದುದನ್ನು ನಾನು ನೋಡಿದೆ ಎಂದು ಅವರನ್ನು ಗುರುತಿಸಿ ಹೇಳಿಕೆ ಕೊಟ್ಟಿಲ್ಲ.

2. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ.8 ರಿಂದ 10 ನ್ನು ಈ ಹಿಂದೆ ನೋಡಿಲ್ಲ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅಬಿಯೋಾಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಸರ್ಕಾರಿ ಅಬಿಯೊಾಜಕರಿಂದ**

3. ಚಾಸಾಃ 5 ಮತ್ತು 6 ನನಗೆ ಸ್ನೇಹಿತರಾಗಿದ್ದು ಸಂಜೆ ವೇಳೆ ಅವರೊಂದಿಗೆ ಕಾಲ ಕಳೆಯುತ್ತಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕಃ 16-12-2017 ರಂದು ನಾನು ಕಾರು ಬಾಡಿಗೆಗೆ ಹೋಗಿ ರಾತ್ರಿ 9 ಗಂಟೆ ಸಮಯದಲ್ಲಿ ಚಾಸಾಃ 5 ಮತ್ತು 6 ರವರೊಂದಿಗೆ ನಮ್ಮ ಊರಿನ ದಂಡಿನ ಮಾರಮ್ಮ ದೇವಸ್ಥಾನದ ಮುಂಬಾಗ ಕುಳಿತು ಮಾತನಾಡುತ್ತಾ ಬೀರು ಕುಡಿಯುತ್ತಿದ್ದಾಗ ರಾತ್ರಿ 11 ಗಂಟೆ ಸಮಯದಲ್ಲಿ 1 ರಿಂದ 6 ಅರೋಪಿಗಳು ಮಧುಗಿರಿಯ ಅಟೋಚಾಲಕ ಮಹಾಂತೇಶ ರವರನ್ನು ಅಟೋದಿಂದ ಹೊರಗೆ ಎಳೆದು ಲಾಂಗು ಮತ್ತು ರಾಡಿನಿಂದ ಹಲ್ಲೆ ಮಾಡಿ ಬೀರು ಬಾಟಲನಿಂದ ತಿವಿದಿದ್ದನ್ನು ನಾನು ನೋಡಿದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಅರೋಪಿಗಳು ಕೊಲೆ ಮಾಡಿದನ್ನು ನೋಡಿದ ನಂತರ ನನಗೆ ಹೆದರಿಕೆ ಅಗಿ ಯಾರಿಗೂ ಹೇಳದೇ ಸ್ಥಳದಿಂದ ಹೋಗಿದ್ದು ಪೊಲೀಸರು ವಿಚಾರಣೆ ಮಾಡುವ ವೇಳೆ ಈಗ ಓದಿ ಹೇಳಿದ ನಿಪಿ.12 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.

4. ದಿನಾಂಕಃ 19-12-2017 ರಂದು ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಪೊಲೀಸರ ಮುಂದೆ ನಾನು, ಚಾಸಾಃ 5 ಮತ್ತು 6 ದಂಡಿನ ಮಾರಮ್ಮನ ದೇವಸ್ಥಾನದ ಬಳಿ ಬೀರು ಕುಡಿಯುವ ಉದ್ದೇಶಕ್ಕಾಗಿ ಕುಳಿತು ಮಾತನಾಡುತ್ತಿದ್ದಾಗ ಒಂದು ಅಟೋ ಮತ್ತು ಬೈಕ್ ಸ್ಟಾಟಿಂಗ್ ನಲ್ಲೇ ನಿಂತಿದ್ದು ಅವುಗಳ ಲೈಟ್ ಬೆಳಕಿನಲ್ಲಿ ನೋಡಿದಾಗ 1, 2, 4, 5 ಮತ್ತು 6 ನೇ ಅರೋಪಿ ಮೃತ ಮಹಾಂತೇಶನನ್ನು ಕೆಳಕ್ಕೆ ಕೆಡವಿ ಲಾಂಗು ಮತ್ತು

ರಾಡಿನಿಂದ ಹೊಡೆಯುತ್ತಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಅದೇ ದಿನ ಎಲ್ಲಾ ಅರೋಪಿಗಳನ್ನು ಮಧುಗಿರಿ ಠಾಣೆಯಲ್ಲಿ ನೋಡಿ ಗುರುತಿಸಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. 1, 3 ರಿಂದ 6 ಅರೋಪಿಗಳೊಂದಿಗೆ ಇದ್ದ ಮತ್ತೊಬ್ಬ ಅರೋಪಿ ವೆಂಕಟೇಶ ಎಂದು ನನಗೆ ಪೊಲೀಸ್ ಠಾಣೆಯಲ್ಲಿ ತಿಳಿದಿತ್ತು ಎಂದು ಈಗ ಓದಿ ಹೇಳಿದ ನಿಪಿ.13 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.

5. ಅರೋಪಿಗಳು ಮೃತ ಮಹಾಂತೇಶನನ್ನು ಕೊಲೆ ಮಾಡಿದ್ದನ್ನು ನಾನು ಕಣ್ಣಾಗೆ ನೋಡಿದ್ದೆ ಎಂದು ಪೊಲೀಸರ ಮುಂದೆ ನಿಪಿ.12 ಮತ್ತು 13 ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಅರೋಪಿಗಳು ನನಗೆ ಪರಿಚಯಸ್ಥರಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರಃ**

ಪಾಟೀ ಸವಾಲು ಇಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.